# ಪ್ರಶ್ನೆ:

# “ಸಭೆಯ ಸದಸ್ಯರು ಐಕ್ಯವಾಗಿರತಕ್ಕದ್ದೋ?”

## ಉತ್ತರ:

ಯೇಸುವು ತನ್ನನ್ನು ಹಿಂಬಾಲಿಸುವ ಮತ್ತು ತನ್ನ ಚಿತ್ತಕ್ಕೆ ವಿಧೇಯರಾಗುವ ಎಲ್ಲಾ ಜನರ ಐಕ್ಯತೆಗಾಗಿ ಯೋಹಾನ 17ರಲ್ಲಿ ಪ್ರಾರ್ಥಿಸಿದನು: “ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ; ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ; ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ” (ವಚನಗಳು 20, 21). ಕೊರಿಂಥದಲ್ಲಿಯ ಕ್ರೈಸ್ತರಿಗೆ ಪೌಲನು ಬರೆದಾಗ, ಸಹೋದರರಲ್ಲಿ ಐಕ್ಯತೆಯ ಬಗ್ಗೆ ಅವನು ಬರೆದನು.

### ನಾವು ಸಹೋದರರು

ಅವರ ಸಂಬಂಧವು ಒಬ್ಬರೊಂದಿಗೆ ಒಬ್ಬರಿಗೆ ಯಾವುದು ಇರಬೇಕೆಂದು ಕೊರಿಂಥದಲ್ಲಿಯ ಕ್ರೈಸ್ತರು ಅರ್ಥಮಾಡಿಕೊಳ್ಳಲು ಸಹಾಯ ಮಾಡಲು ಪೌಲನು ವಿವಿಧ ಮಾತುಗಳನ್ನು ಉಪಯೋಗಿಸಿದನು. ಅವರು ದೇವರ ಮುಂದೆ ಪರಿಶುದ್ಧ ಜೀವಿತ ಜೀವಿಸಲು ಪಾಪದಿಂದ ಅವರು ಹೊರಗೆ ಕರೆಯಲ್ಪಟ್ಟದ್ದನ್ನು ಕುರಿತು ಅವರು ಪರಿಶುದ್ಧ ಜನರು ಎಂದು ಕರೆಯಲ್ಪಟ್ಟರು (1 ಕೊರಿಂಥ 1:2). ಅವರು ಒಬ್ಬರು ಇನ್ನೊಬ್ಬರ ಭಾಗ ವಾಗಿರುವದನ್ನು ಕುರಿತು, ಪೌಲನು ಅವರನ್ನು ಒಂದು ದೇಹದ ಸದಸ್ಯರಾಗಿರುವರೆಂದು ವಿವರಿಸಿದನು (1 ಕೊರಿಂಥ 12:12, 27). ಎಲ್ಲಕ್ಕಿಂತಲೂ ಹೆಚ್ಚಾಗಿ ಅವರು ಒಂದೇ ಕುಟುಂಬದ ಸದಸ್ಯರಾಗಿದ್ದು, ಸಹೋದರರಾಗಿರುವರೆಂದು ವಿವರಣೆಯು ಉಪಯೋ ಗಿಸಲ್ಪಟ್ಟಿದೆ ಈ ರೀತಿಯಲ್ಲಿ ಸುಮಾರು ಇಪ್ಪತ್ತು ಸಲ ಅವನು ಸಂಬೋಧಿ ಸಿದ್ದಾನೆ (1:10, 11, 26; 2:1; 3:1; 4:6; 7:24, 29; 10:1; 11:33; 12:1; 14:6, 20, 26, 39; 15:1, 31, 50, 58; 16:15). ಉತ್ಥಾನವಾದ ಕ್ರಿಸ್ತನು “ಒಂದು ಸಮಯದಲ್ಲಿ ಐದು ನೂರಕ್ಕಿಂತಲೂ ಹೆಚ್ಚು ಸಹೋದರರಿಗೆ” ಕಾಣಿಸಿಕೊಂಡನು (1 ಕೊರಿಂಥ 15:6), ಮತ್ತು ಎಫೆಸದಲ್ಲಿಯ “ಎಲ್ಲಾ ಸಹೋದರರು” ಕೊರಿಂಥದಲ್ಲಿಯ ತಮ್ಮ ಸಹೋದರರಿಗೆ ವಂದನೆ ತಿಳಿಸಿದ್ದಾರೆ (1 ಕೊರಿಂಥ 16:20) ಎಂದೂ ಸಹ ಅವರು ಅವರಿಗೆ ತಿಳಿಸಿದ್ದಾರೆ.

ಕೊರಿಂಥದ ಸಹೋದರರು ಒಂದೇ ದೈಹಿಕ ಕುಟುಂಬದವರಾಗಿರಲಿಲ್ಲ. “ಕರ್ತನ ಸಹೋದರರು” ಎಂದು ಪೌಲನು ಮಾತನಾಡಿದಾಗ ಅಕ್ಷರಶಃ ಕುಟುಂಬವನ್ನು

ಸಂಬಂಧಿಸಿ ಹೇಳಿದನು (1 ಕೊರಿಂಥ 9:5). "ಯಾಕೋಬ ಯೋಸೆ ಯೂದ ಸೀಮೋನರ" ಬಗ್ಗೆ ಪೌಲನು ಯೋಚಿಸುತ್ತಿದ್ದನು (ಮಾರ್ಕ 6:3), ಅವರು ಯೋಸೇಫ ಮತ್ತು ಮರಿಯಳ ಕುಟುಂಬದಲ್ಲಿ ಮಲಸಹೋದರರಾಗಿದ್ದರು. ದೈಹಿಕ ಕುಟುಂಬದಲ್ಲಿ ಇರುವ ಸಂಬಂಧಕ್ಕೆ ಕೊರಿಂಥದಲ್ಲಿಯ ದೇವರ ಆತ್ಮಿಕ ಕುಟುಂಬಕ್ಕೆ ಸಂಬಂಧಿಸಿ ಸೂಚಿಸುವಲ್ಲಿ ಯಾವುದೋ ವಿಶೇಷತೆಯಿದೆ ಎಂದು ಪೌಲನು ಯೋಚಿಸಿದನು.

ಒಂದು ಮನೆಯವರು ಒಂದು ಕುಟುಂಬವಾಗಿರುವ (ಯೋಸೇಫ ಮತ್ತು ಮರಿಯಳು ಹಾಗೂ ಅವರ ಮಕ್ಕಳಂಥ) ವಿಚಾರಕ್ಕಿಂತ ವಿಶಾಲವಾಗಿ ಒಬ್ಬನ ಸಂತತಿಯವರನ್ನು ಒಬ್ಬ ಮನುಷ್ಯನ ಕುಟುಂಬವೆಂದು ಕರೆಯಲ್ಪಡುವ ಭಾವನೆಯಾಗಿದೆ. ಪ್ರತಿಯೊಬ್ಬ ಯೆಹೂದ್ಯನು ಹಿಂದಕ್ಕೆ ಒಬ್ಬ ಮನುಷ್ಯನನ್ನು, ಅಬ್ರಹಾಮನನ್ನು, ತನ್ನ ಕುಟುಂಬದ ಪ್ರಾರಂಭದಂತೇ ನೋಡುತ್ತಾನೆ (ಮತ್ತಾಯ 3:9). ಅನನೀಯನು ಸೌಲನನ್ನು "ಸಹೋದರ" ಎಂದು ಕರೆದಾಗ (ಅಪೊಸ್ತಲರ ಕೃತ್ಯಗಳು 9:17), ಅವನು ಕುಟುಂಬ ಎಂಬ ಮಾತನ್ನು ಜಾನಾಂಗಿಕ ಹಿನ್ನಲೆಯಲ್ಲಿ ಉಪಯೋಗಿಸಿದನು. ಸೌಲನು ಅನನೀಯನ ಯೆಹೂದಿ ಸಹೋದರನಾಗಿದ್ದನು ಮತ್ತು ಅವನ ಬಾಪ್ತಿಸ್ಮದ ನಂತರ ಅವನು ಕರ್ತನಲ್ಲಿ ಅನನೀಯನ ಸಹೋದರನಾದನು.

## ನಾವು ಒಂದು ಆತ್ಮಿಕ ಕುಟುಂಬ

ಕ್ರೈಸ್ತರನ್ನು ಒಂದಾಗಿ ಒಂದು ಆತ್ಮಿಕ ಕುಟುಂಬದಂತೆ, ಒಬ್ಬ ಮನುಷ್ಯನ ಸ್ವಾಭಾವಿಕ ಕುಟುಂಬದ ಉದಾರಣೆಯ ಮೇಲೆ ಕಟ್ಟಲ್ಪಡುವಂತೆ ಮತ್ತು ಜಾನಾಂಗಿಕ ಕುಟುಂಬದಂತೆ - ಮಾತಾಡುವದಕ್ಕೆ ಪರಿಶುದ್ಧಾತ್ಮನು ಇಷ್ಟವುಳ್ಳವನಾದನು. ಯಾವುದೇ ಉದಾಹರಣೆಯು ಪರಿಪೂರ್ಣವಾದದ್ದಾಗಿರುವದಿಲ್ಲ, ಆದರೆ ಈ ಸಾಮ್ಯವು ಅರ್ಥ ಗರ್ಭಿತವಾದದ್ದಾಗಿದೆ. ಆತ್ಮಿಕ ಕುಟುಂಬದಲ್ಲಿ ದೇವರ ಹೆಂಡತಿಯಂತೆ, ಯಾವ ತಾಯಿಯು ಇರುವದಿಲ್ಲ, ಆದರೆ ಒಬ್ಬ ತಂದೆಯಿರುತ್ತಾನೆ (1 ಯೋಹಾನ 3:1), ಒಬ್ಬ ಹಿರಿ ಅಣ್ಣನಿರುತ್ತಾನೆ (ರೋಮಾಪುರ 8:29), ಮತ್ತು ಸಹೋದರರು, ಸಹೋದರಿಯರು ಇರುತ್ತಾರೆ (ಇಬ್ರಿಯ 2:11).

ಆತ್ಮಿಕವಾಗಿ, ಪಾಪಿಗಳು ದೇವರ ವಾಕ್ಯದ ಮುಖಾಂತರ (1 ಪೇತ್ರ 1:23) ತಂದೆಯಾದ ದೇವರಿಂದ ಪಡೆದುಕೊಳ್ಳಲ್ಪಡುತ್ತಾರೆ (ಯಾಕೋಬ 1:18), ನೀರು ಮತ್ತು ಆತ್ಮನಿಂದ ಎರಡನೆಯ ಸಲ ಹುಟ್ಟುತ್ತಾರೆ (ಯೋಹಾನ 3:5). ಅವರು ಹಿರಿ ಅಣ್ಣನ ಸಹೋದರರು, ಸಹೋದರಿಯರು ಆಗುತ್ತಾರೆ (ಮತ್ತು ಆತನು ಅವರ ಬಗ್ಗೆ ನಾಚಿಕೆ ಪಟ್ಟು ಕೊಳ್ಳುವದಿಲ್ಲ; ಇಬ್ರಿಯ 2:11).

## ಪ್ರೀತಿಯಿಂದ ನಾವು ಒಂದಾಗಿ ಕಟ್ಟಲ್ಪಟ್ಟಿರುತ್ತೇವೆ.

ಸ್ವಸ್ಥತೆಯುಳ್ಳ ದೈಹಿಕ ಕುಟುಂಬವು ಸಹೋದರ ಪ್ರೀತಿಯನ್ನು ಅನುಭವಿಸುವಂತೆ, ದೇವರು ತನ್ನ ಆತ್ಮಿಕ ಕುಟುಂಬ ಕುಟುಂಬಕ್ಕೆ ಸಹೋದರರ ಪ್ರೀತಿಯನ್ನು ರೂಢಿಸಲು ಮತ್ತು ಆನಂದಿಸಲು ಯೋಜಿಸಿದ್ದಾನೆ. *Philadelphia,* ಗ್ರೀಕ ಪದದ ಅರ್ಥವು "ಸಹೋದರರ ಪ್ರೀತಿ," ಆಸ್ಯದ ಏಳು ಸಭೆಗಳು ಇದ್ದ ಸ್ಥಳಗಳಲ್ಲಿ ಒಂದು ಪಟ್ಟಣದ ಹೆಸರು ಇದಾಗಿದೆ (ಪ್ರಕಟನೆ 3:7), ಮತ್ತು "ಸಹೋದರರ ಪ್ರೀತಿಯ ಪಟ್ಟಣ" ಎಂದು ಹೆಸರನ್ನು ಅಮೇರಿಕದ ಒಂದು ದೊಡ್ಡ ಪಟ್ಟಣ ಹೊಂದಿಕೊಂಡಿದೆ. ಪರಿಶುದ್ಧಾತ್ಮನು *ಫಿಲಡೆಲ್ಫಿಯಾದ* ಬಗ್ಗೆ ಬಹಳವಾಗಿ ಬರೆದದ್ದರಲ್ಲಿ ಆಶ್ಚರ್ಯವಿಲ್ಲ:

ಕ್ರೈಸ್ತ ಸಹೋದರರು ಅಣ್ಣ ತಮ್ಮಂದಿರೆಂದು *ಒಬ್ಬರನ್ನೊಬ್ಬರು ಪ್ರೀತಿಸಿರಿ* [*philadelphia*]; ಮಾನಮರ್ಯಾದೆಯನ್ನು ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ (ರೋಮಾಪುರ 12:10; ಒತ್ತಿ ಹೇಳಿದ್ದು ನನ್ನದು).

*ಸಹೋದರ ಪ್ರೀತಿಯ ವಿಷಯದಲ್ಲಿ* [*philadelphia*] ನಿಮಗೆ ಬರೆಯುವುದು ಅವಶ್ಯವಿಲ್ಲ; ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಉಪದೇಶವನ್ನು ನೀವೇ ದೇವರಿಂದ ಹೊಂದಿದವರಾಗಿದ್ದು ಸಮಸ್ತ ಮಕೆದೋನ್ಯದಲ್ಲಿರುವ ಸಹೋದರರನ್ನೆಲ್ಲಾ ಪ್ರೀತಿಸುವವರಾಗಿಯೇ ಇದ್ದೀರಿ ... (1 ಥೆಸಲೊನೀಕ 4:9-11; ಒತ್ತಿ ಹೇಳಿದ್ದು ನನ್ನದು).

*ಸಹೋದರ ಪ್ರೀತಿಯು* [*philadelphia*] ನೆಲೆಯಾಗಿರಲಿ (ಇಬ್ರಿಯ 13:1; ಒತ್ತಿ ಹೇಳಿದ್ದು ನನ್ನದು).

ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧ ಮಾಡಿಕೊಂಡದ್ದರಿಂದ ನಿಷ್ಕಪಟವಾದವು *ಸಹೋದರ ಪ್ರೀತಿಯುಳ್ಳವರಾಗಿರತಕ್ಕದ್ದು* [*philadelphia*], ಹೀಗಿರಲಾಗಿ ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಿರಿ (1 ಪೇತ್ರ 1:22; ಒತ್ತಿ ಹೇಳಿದ್ದು ನನ್ನದು).

## ನಾವು ಐಕ್ಯತೆಯನ್ನು ಮುಂದುವರಿಸತಕ್ಕದ್ದು

### ಐಕ್ಯತೆಯು ರಮ್ಯವಾದದ್ದೂ ಒಳ್ಳೆಯದೂ ಆಗಿರುತ್ತದೆ

ಆಹಾ, ಸಹೋದರರು ಒಂದಾಗಿರುವುದು ಎಷ್ಟೋ ಒಳ್ಳೇದು,
ಎಷ್ಟೋ ರಮ್ಯವಾದದ್ದು!
ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು,
ಅವನ ಗಡ್ಡದ ಮೇಲೆಯೂ,
ಅಲ್ಲಿಂದ ಅವನ ಅಂಗಿಗಳ ಕೊರಳಪಟ್ಟಿಯವರೆಗೂ,
ಹರಿದು ಬರುವ ಶ್ರೇಷ್ಠ ತೈಲದಂತೆಯೂ,
ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚೀಯೋನ್ ಪರ್ವತದ
ಮೇಲೆ ಬೀಳುವ ಮಂಜಿನಂತೆಯೂ ಇದೆ.
ಅಲ್ಲಿ ಆಶೀರ್ವಾದವೂ ಜೀವವೂ -
ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ
(ಕೀರ್ತನೆ 133:1-3).

ಕೆಲವು ಸಂಗತಿಗಳು ನಮಗಾಗಿ ಒಳ್ಳೆಯವುಗಳಾಗಿರುತ್ತವೆ, ಆದರೆ ರಮ್ಯವಾದವುಗಳಾಗಿರುವದಿಲ್ಲ: ಉದಾಹರಣೆಗಾಗಿ, ಕೆಲಸ (ನೋಡಿರಿ ತೀತ 3:14) ಮತ್ತು ಶಿಕ್ಷೆ (ಜ್ಞಾನೋಕ್ತಿ 13:24; ಇಬ್ರಿಯ 12:11) ಕೆಲವು ಸಂಗತಿಗಳು ರಮ್ಯವಾದವುಗಳಾಗಿರುತ್ತವೆ, ಆದರೆ ನಮಗಾಗಿ ಒಳ್ಳೆಯವುಗಾಳಾಗಿರುವದಿಲ್ಲ: "ಪಾಪ ಭೋಗಗಳು" (ಇಬ್ರಿಯ 11:25), ಅತೀ ನಿದ್ರೆ ಮತ್ತು ಮಿತಿಮೀರಿ ತಿನ್ನುವುದು (ಜ್ಞಾನೋಕ್ತಿ 6:10, 11; 23:21).

ಒಬ್ಬನು ತಾನು ಅನುಭವಿಸಿದ ಪ್ರತಿಯೊಂದು ಅಕ್ರಮವಾಗಿತ್ತು, ಅನೈತಿಕವಾಗಿತ್ತು ಇಲ್ಲವೇ ದಪ್ಪಗೊಳಿಸುವಂಥದ್ದಾಗಿತ್ತು ಎಂದು ಹೇಳಿದ್ದಾನೆ. ಒಂದೇ ಸಮಯದಲ್ಲಿ ಒಂದು ಸಂಗತಿಯು ನಮಗಾಗಿ ಒಳ್ಳೆಯದೂ ರಮ್ಯವಾದದ್ದೂ ಆಗಿದೆ: ಹೃದಯ ಮತ್ತು ಪ್ರಾಣಗಳ ಐಕ್ಯತೆಯಲ್ಲಿ ಸಹೋದರರು ಒಂದಾಗಿ ಜೀವಿಸುವುದು.

ಐಕ್ಯತೆಯ ರಮ್ಯತೆಯನ್ನು ನೋಡಲು ನಮಗೆ ಸಹಾಯ ಮಾಡಲು, ಪರಿಶುದ್ಧಾತ್ಮನು, ರಕ್ತಬೋಳ, ಲವಂಗಚಕ್ಕೆ, ಸುಗಂಧವಾದ ಬಜೆ, ಸುಗಂಧ ತೈಲದ ಉದಾಹರಣೆಯನ್ನು ಉಪಯೋಗಿಸಿದನು (ವಿಮೋಚನಕಾಂಡ 30:23-33). ಈ ಮಿಶ್ರಣವು "ಪರಿಶುದ್ಧವಾದ ಅಭಿಷೇಕ ತೈಲ, ಸುಗಂಧ ಮಿಶ್ರಣ, ಸುಗಂಧ ದ್ರವ್ಯ ತಯಾರಿಸುವವನ ಕಾರ್ಯ" ವಾಗಿರ ಬೇಕಾಗಿತ್ತು - ಯಾಜಕನಲ್ಲದೇ ಬೇರೆ ಯಾವ ವ್ಯಕ್ತಿಯೂ ಆ ಅಭಿಷೇಕ ಮಾಡಲು ಅಪ್ಪಣೆ ಹೊಂದಿರಲಿಲ್ಲ. ಹಾದು ಹೋಗುವ ಪ್ರತಿಯೊಬ್ಬ ಯಾಜಕನ ಆಹ್ಲಾದಕರ ಸುವಾಸನೆಯು ಸಹೋದರರ ಒಂದಾಗಿರುವಿಕೆಯ ಪರಿಮಳವಾಗಿತ್ತು.

ಸಹೋದರರ ಒಂದಾಗಿರುವಿಕೆಯನ್ನು ಪ್ರಶಂಸಿಸಲು ದಾವೀದನಿಂದ ಎರಡನೆಯ ಉದಾಹರಣೆಯು ಉಪಯೋಗಿಸಲ್ಪಟ್ಟಿತು: ಹೆರ್ಮೋನ ಪರ್ವತದಿಂದ ಹಿಮವು ಕರಗುವಾಗ (9,200 ಅಡಿ ಎತ್ತರ) ದಕ್ಷಿಣಕ್ಕೆ 120 ಮೈಲು ದೂರ ಮಂಜು ಹರಡಿ ಚೀಯೋನ ಪರ್ವತದ ಮೇಲೆ (2,500 ಅಡಿ ಎತ್ತರ) ನಿಂತು ಕೊಳ್ಳುತ್ತಿತ್ತು. ಯೆರೂಸಲೇಮಿನಲ್ಲಿಯ ಯೆಹೂದ್ಯರು ತೋಟಗಳ ಮತ್ತು ಹೂವುಗಳ ಮೇಲೆ ಮಂಜನ್ನು ನೋಡಿ ಒಳ್ಳೆಯತನದಿಂದಲೂ ರಮ್ಯತೆಯಿಂದಲೂ ಪ್ರತಿಕ್ರಿಯೆ ತೋರಿಸುತ್ತಿದ್ದರು. ಸಹೋದರರು ತಾವು ಇರಬೇಕಾದ ರೀತಿಯಲ್ಲಿ ಜೀವಿಸುತ್ತ ಒಂದಾಗಿ ಕಾರ್ಯ ಮಾಡುವದನ್ನು ನೋಡುವಾಗ ಸರಿಯಾಗಿ ಯೋಚಿಸುವ ವ್ಯಕ್ತಿಯು ಅದೇ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಬೇಕು.

**ವಿರೋಧವು ಕುರೂಪಕವಾದದ್ದಾಗಿದೆ**

ಸಹೋದರರು ಐಕ್ಯತೆಯಲ್ಲಿ ಒಂದಾಗಿ ಜೀವಿಸಿ, ಕಾರ್ಯಮಾಡುವದರಲ್ಲಿ ಸೋತು ಹೋಗುವಿಕೆಯ ಕುರೂಪವು ಕಾಯೀನನು ತನ್ನ ಸಹೋದರನನ್ನು ಕೊಲೆ ಮಾಡಿದ್ದರಲ್ಲಿ, ಇಪ್ಪತ್ತು ವರ್ಷ ವಯಸ್ಸಿನ ಇಷ್ಮಾಯೇಲನು ತನ್ನ ಸಹೋದರನು ಬೆಳೆಯುತ್ತಿರುವಾಗ ಅಪಹಾಸ್ಯ ಮಾಡಿದ್ದರಲ್ಲಿ ಕಂಡುಬರುತ್ತದೆ (ಆದಿಕಾಂಡ 4:8; 21:9). ಹಾಗೆಯೇ, ಯಾಕೋಬನು ತನ್ನ ಅವಳಿ ಸಹೋದರನಿಗೆ ಮೋಸ ಮಾಡಿದಾಗ, "ಏಸಾವನು ಯಾಕೋಬನಿಗೆ ವಿರುದ್ಧವಾಗಿ ದ್ವೇಷ ಬೆಳಸಿಕೊಂಡದ್ದರಲ್ಲಿ ಆಶ್ಚರ್ಯವೇನಿಲ್ಲ" (ಆದಿಕಾಂಡ 27:41) ಮತ್ತು ಅವನನ್ನು ಕೊಲ್ಲಲು ಯೋಚಿಸಿದನು. ಸಹೋದರರ ಮಧ್ಯದಲ್ಲಿ ದ್ವೇಷವನ್ನು ಹಬ್ಬಿಸುವನು ಕರ್ತನಿಗೆ ಅಸಹ್ಯನಾಗಿದ್ದಾನೆ (ನೋಡಿರಿ ಜ್ಞಾನೋಕ್ತಿ 6:16-19). ಈ ಎಚ್ಚರಿಕೆ, ಉದಾಹರಣೆಗಳು ಇದ್ದರೂ, "ಒಬ್ಬರನ್ನೊಬ್ಬರು ಕಚ್ಚುವವರೂ ನುಂಗುವದಕ್ಕೆ ನೋಡುವವರೂ," ಆದ ಸಹೋದರ ಸಹೋದರಿಯರೂ ಮತ್ತು "ಸುಳ್ಳು ಸಹೋದರರೂ" ಇರುವರು (ಗಲಾತ್ಯ 5:15; 2:4).

**ವಿಭಾಗಿಸುವಿಕೆಯು ಸಮಾಧಾನಕರವಾದದ್ದಾಗಿರಬಹುದು**

ಒಂದಾಗಿ ಜೀವಿಸುವುದು ಮಹತ್ವದ್ದಾಗಿರುವಂತೆ, ಕೆಲವೊಂದು ಬೇರೆಯಾಗಿ ಜೀವಿಸುವ ರೀತಿ ಕೆಟ್ಟದ್ದಾಗಿದೆ: ಬೆಕ್ಕು - ನಾಯಿಯ ಜೀವಿತ, ಒಬ್ಬರನ್ನೊಬ್ಬರು ಕಚ್ಚುವುದು, ನುಂಗುವುದು. ಮತ್ತು ಇಬ್ಬರೂ ಸಹೋದರರು ತಮ್ಮ ಪ್ರಾಣಗಳನ್ನು

ಕಳೆದುಕೊಳ್ಳುವುದು. ಬುದ್ಧಿವಂತನಾದ ಅಬ್ರಹಾಮನು, ಲೋಟನ ಜನರೊಂದಿಗೆ ಒಂದಾಗಿ ಇರುವದನ್ನು ಒತ್ತಿ ಹೇಳಿದರೆ ಏನು ಸಂಭವಿಸಬಹುದು ಎಂಬುದನ್ನು ನೋಡಿ, ಸ್ನೇಹ ಪೂರ್ವಕವಾದ ಬೇರೆಯಾಗುವಿಕೆಯನ್ನು ಸಲಹೆ ಮಾಡಿದನು. ಯಾವುದೇ ಪರಿಸ್ಥಿತಿಯಲ್ಲಿ ಹೋರಾಟವು ನಡೆಯಬಾರದೆಂದು ಅವನು ತಿಳಿದಿದ್ದನು. "ತಾವು ಸಹೋದರರೆಂದು" ಅರಿತುಕೊಂಡಿದ್ದನು (ಆದಿಕಾಂಡ 13:8). ಬೇರೆಯಾಗುವುದು ಆದರ್ಶವಾದದ್ದಾಗಿರಲಿಲ್ಲ, ಆದರೆ ಅದು ಎರಡು ಕೆಡುಕಗಳಲ್ಲಿ ಕಡಿಮೆ ಕೆಡುಕು ಆಗಿತ್ತು, ಮತ್ತು ಅಬ್ರಾಹಾಮನು ಅದರೊಳಗಿಂದ ಹೊರಗೆ ಬರಲು ಒಳ್ಳೆಯದನ್ನು ಮಾಡಿದನು.

ಪೌಲ ಮತ್ತು ಬಾರ್ನಬರಿಗೆ "ತೀಕ್ಷ್ಣವಾಗ್ವಾದ" ವುಂಟಾದಾಗ (ಅಪೊಸ್ತಲರ ಕತ್ಯಗಳು 15:39), ಇಬ್ಬರು ಶ್ರೇಷ್ಠ ಸಹೋದರರ ಮಧ್ಯದಲ್ಲಿ ಮನಸ್ಸುಗಳು ಒಂದಾಗುವ ಮಾರ್ಗವಿಲ್ಲದಾಗ, ಬೇರೆಯಾಗುವುದು ಹೆಚ್ಚು ಒಳ್ಳೆಯದನ್ನು ಮಾಡುವದರಲ್ಲಿ ಪರಿಣಾಮಗೊಂಡಿತು, ಅದೇ ರೀತಿಯಲ್ಲಿ ಕೆಲವು ಸಭೆಗಳು ಒಂದಕ್ಕೊಂದು ವೈಷಮ್ಯ ದಿಂದಿರುವದರ ಬದಲು, ಬೇರೆ ಯಾಗುವದರಿಂದ ಕೆಲವು ಸಲ ಹೆಚ್ಚು ಪರಿಣಾಮಕಾರಿಯಾಗಿ ಕರ್ತನ ಕಾರಣವನ್ನು ಮುಂದುವರಿಸಲು ಶಕ್ತವಾಗಿರುವವು.

**ನೀತಿಯು ಬೇರೆಯಾಗುವದನ್ನು ಕೇಳಬಹುದು**

ಮೇಲಿನ ಉದಾಹರಣೆಗಳಲ್ಲಿ, ಬೇರೆಯಾಗುವದಕ್ಕೆ ಸರಿಯಾದ ಇಲ್ಲವೇ ತಪ್ಪಾದ ಯಾವುದೇ ತತ್ವದ ಅವಶ್ಯಕತೆಯಿರಲಿಲ್ಲ. ಕೊರಿಂಥ ಸಭೆಯಲ್ಲಿ ಒಬ್ಬ ಸದಸ್ಯನನ್ನು ಹೊರಗೆ ಹಾಕುವುದು ದುಃಖಕರವಾದ ಸಂಗತಿಯಾಗಿತ್ತು, ಆದರೆ ಅನ್ಯೋನ್ಯತೆಯಲ್ಲಿ ಅಂಥ ವ್ಯಕ್ತಿಯನ್ನು ಇಟ್ಟುಕೊಳ್ಳುವದಕ್ಕಾಗಿ ಕೊಡಬೇಕಾದ ಕ್ರಯವು ಅತೀಯಾಗಿತ್ತು (1 ಕೊರಿಂಥ 5:13).

ಸುನ್ನತಿಯ ಪ್ರಶ್ನೆಯ ಮೇಲೆ ಯೆರೂಸಲೇಮಿನಲ್ಲಿಯ ಯೆಹೂದಿ ಕ್ರೈಸ್ತರೊಂದಿಗೆ ಪೌಲನು ಒಮ್ಮತವನ್ನು ಬಯಸಿದ್ದನು. ಅವನು ಯಾವಾಗಲೂ ಎಲ್ಲಾ ಮನಷ್ಯರಿಗೂ ಎಲ್ಲಾ ಸಂಗತಿಯಾಗಿರಲು ಪ್ರಯತ್ನಿಸಿದನು (1 ಕೊರಿಂಥ 9:22). ಹಾಗಿದ್ದರೂ, ಅದು ಅನ್ಯ-ಕ್ರೈಸ್ತರು ಸುನ್ನತಿ ಹೊಂದಲು ಒತ್ತಾಯಿಸಲ್ಪಡ ಬೇಕಾಗಿದ್ದಾಗ, ಐಕ್ಯತೆಗೆ ಬೆಲೆಯು ಅತಿಶಯವಾದದ್ದಾಗಿದೆಯೆಂದು ಪೌಲನು ಯೋಚಿಸಿದನು. ಪೌಲನು, ಕೇಳುತ್ತಿದ್ದ ಆ ಸಹೋದರರಿಗೆ "ಸುವಾರ್ತೆಯ ಸತ್ಯಾರ್ಥವು ಸ್ಥಿರವಾಗಿರಬೇಕೆಂದು ಒಂದು ಗಳಿಗೆ ಹೊತ್ತಾದರೂ ಸಮ್ಮತಿಸಲಿಲ್ಲ" (ಗಲಾತ್ಯ 2:5). ಇಂದು ಸಹೋದರರು ಐಕ್ಯತೆಯ ಹೆಸರಿನಲ್ಲಿ ಬೈಬಲ್ ಕ್ಲಾಸುಗಳು ಸಭೆಯ ಸಹಾಯದೊಂದಿಗೆ ಮಕ್ಕಳ ನಿಯಮಗಳು, ಸಭೆಯ ಸಹಕಾರ ಇರಬಾರದೆಂದು ಕೇಳುವಾಗ ಅವರು ಮಾನವ ನಿಯಮಗಳನ್ನು ಮಾಡುವವರಾಗುತ್ತಾರೆ. ಸಭೆಯು ತನ್ನ ಸ್ವಾತಂತ್ರಯದಲ್ಲಿ ಸ್ಥಿರವಾಗಿ ನಿಲ್ಲಬೇಕೆಂದು ನಂಬುವವರು (ನೋಡಿರಿ ಗಲಾತ್ಯ 5:1), ವಿಭಾಗವಾದರೂ, ಬೈಬಲ್ ಕ್ಲಾಸಿನಲ್ಲಿಯ, ಅನಾಥಾಶ್ರಮಗಳಲ್ಲಿ ಮತ್ತು ಹೆಚ್ಚು ದೊಡ್ಡ ಒಳ್ಳೆಯದಕ್ಕಾಗಿ ಸಭೆಗಳು ಒಂದಾಗಿ ಕಾರ್ಯಮಾಡುವದನ್ನು ಒಪ್ಪಿಸಿಬಿಡಲಾರವು.

ಹಾಗೆಯೇ ಸುಳ್ಳು ಬೋಧನೆಯನ್ನು ಕುರಿತು, ಪ್ರತಿಯೊಬ್ಬ ವ್ಯಕ್ತಿಯು ತಾಳ್ಮೆಯು ಎಷ್ಟು ಸಮಯದ ವರೆಗೆ ಸದ್ಗುಣವಾಗಿರುವುದು ಎಂಬುದನ್ನು ತಾನೇ ತೀರ್ಮಾನಿಸಿ ಕೊಳ್ಳತಕ್ಕದ್ದು. ಬೈಬಲಿಗನುಗುಣವಾಗಿ, ಪರಲೋಕದ ಆಜ್ಞೆಯು ಕಾರ್ಯರೂಪಕ್ಕೆ ತರಬೇಕಾದ ಸಮಯವು ಬರುತ್ತದೆ: "ಸಹೋದರರೇ, ನೀವು ಹೊಂದಿದ ಉಪ ದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ"

(ರೋಮಾಪುರ 16:17).

## "PREACHERITIS" ನ್ನು ನೀವು ತಪ್ಪಿಸಿಕೊಳ್ಳತಕ್ಕದ್ದು

1 ಕೊರಿಂಥದಲ್ಲಿಯ ಸಂದೇಶವು ಆ ಪಟ್ಟಣದಲ್ಲಿಯ ಪರಿಶುದ್ಧರಿಗೆ "ಪ್ರಸಂಗಿಗಳ ಪೂಜೆಯ" ಕೆಟ್ಟ ವಿಷಯವಿತ್ತೆಂದು ಸ್ಪಷ್ಟಪಡಿಸುತ್ತದೆ. " 'ನಾನು ಪೌಲನವನು,' ಮತ್ತು 'ನಾನು ಅಪೊಲ್ಲೋಸನವನು,' ಮತ್ತು 'ನಾನು ಕೇಫನವನು,' ಮತ್ತು 'ನಾನು ಕ್ರಿಸ್ತನವನು' " ಎಂದು ಹೇಳುವವರು ಇದ್ದರು (1 ಕೊರಿಂಥ 1:12).

"ಪ್ರಸಂಗಿಗಳ ಪೂಜೆಯು" ಒಂದು ಪಾಪವಾಗಿದ್ದರೂ, ಪ್ರಸಂಗಿಗಳು ಮಹತ್ವವುಳ್ಳವರು ಎಂಬುದು ಸತ್ಯವಾಗಿ ಉಳಿಯುತ್ತದೆ. ಪಾಪಿಗಳನ್ನು ಅವರ ರಕ್ಷಕನ ಕಡೆಗೆ ತರುವ ಒಂದು ಕೊಂಡಿಯಂತೆ ಅವರು ಪರಲೋಕದ ಯೋಜನೆಯ ಭಾಗವಾಗಿದ್ದಾರೆ (ರೋಮಾಪುರ 10:13-15). ಆದಾಗ್ಯೂ, ಪ್ರಸಂಗಿಗಳು ತಮ್ಮಲ್ಲಿ, ತಾವೇ ಮಹತ್ವವುಳ್ಳವರಾಗಿರುವದಿಲ್ಲ. ವೈಯಕ್ತಿಕವಾಗಿ, ಯಾವ ಕೃಪೆಯನ್ನೂ ಒದಗಿಸಲಾರರು. ಪೌಲನು ಹೇಗೆ ಬರೆದಿದ್ದಾನೆ:

> ಹಾಗಾದರೆ ಅಪೊಲ್ಲೋಸನು ಏನು? ಪೌಲನು ಏನು? ಅವರು ಸೇವಕರು; ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ; ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ. ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರು ಹೊಯಿದನು, ಆದರೆ ಬೆಳೆಸುತ್ತಾ ಬಂದವನು ದೇವರು (1 ಕೊರಿಂಥ 3:5-7).

ಶತಮಾನಗಳಲ್ಲಿ, ಮಾಹಿತಿ ಹೊಂದದ ಜನರು ಬಲವಾದ ಪ್ರಸಂಗಿಗಳ ವ್ಯಕ್ತಿತ್ವಗಳಿಂದ ಸೆಳೆಯಲ್ಪಟ್ಟು ಕ್ರಿಸ್ತನಿಗಿಂತ ಹೆಚ್ಚಾಗಿ ಮಾನವ ನಾಯಕರ ಕಡೆಗೆ ನೋಡಿದ್ದಾರೆ.

## ಮುಕ್ತಾಯ

ಕ್ರೈಸ್ತರಾಗಿ ನಾವು ನಮ್ಮ ನಿಷ್ಠೆಯನ್ನು ಒಬ್ಬ ಪ್ರಸಂಗಿಯ ಮೇಲೆ ಇಲ್ಲವೇ ನಾವು ಮೆಚ್ಚಿಕೊಳ್ಳಲು ಕಲಿತುಕೊಂಡ ಒಬ್ಬ ನಾಯಕನ ಮೇಲೆ ಅಲ್ಲ, ಆದರೆ ಕ್ರಿಸ್ತನ ಮೇಲೆ ಕೇಂದ್ರೀಕರಿಸಬೇಕು. ಯೇಸುವಿನ ಮೇಲೆ ಕೇಂದ್ರೀಕರಿಸಲ್ಪಟ್ಟ ಐಕ್ಯತೆಯ ಮಟ್ಟವು ಕೇವಲ ಹೊಸ ಒಡಂಬಡಿಕೆಯಲ್ಲಿ, ಅಪೊಸ್ತಲರ ಬೋಧನೆಯಲ್ಲಿ ಕಂಡುಬರುತ್ತದೆ (ಅಪೊಸ್ತಲರ ಕೃತ್ಯಗಳು 2:42). ಅದರಲ್ಲಿ ನಾವು ಧರ್ಮದಲ್ಲಿ ಯಾವುದು ಸತ್ಯವಾದದ್ದು ಮತ್ತು ಯಾವುದು ತಪ್ಪಿನ ಆತ್ಮವಾಗಿರುವುದು ಎಂದು ನಾವು ಕಲಿತುಕೊಳ್ಳುತ್ತೇವೆ (1 ಯೋಹಾನ 4:6). ಹೊಸ ಒಡಂಬಡಿಕೆಯಲ್ಲಿ ಮಾತ್ರವೇ "ವಿಶ್ವಾಸದ ಐಕ್ಯತೆಯು" ಸಾಧ್ಯತೆಯಿದೆ (ಎಫೆಸ 4:13). "ಮಾರ್ಗವೂ ಸತ್ಯವೂ ಜೀವವೂ" ಆಗಿರುವ ಕ್ರಿಸ್ತನ ಮೇಲೆ ನಾವು ಕೇಂದ್ರೀಕರಿಸಬೇಕು (ಯೋಹಾನ 14:6). ಇದನ್ನು ವ್ಯಾವಹಾರಿಕ ರೀತಿಯಲ್ಲಿ ಮಾಡಲಿಕ್ಕೆ "ಸತ್ಯದ ವಾಕ್ಯವನ್ನು, ಸುವಾರ್ತೆಯನ್ನು" ನಾವು ಘನಪಡಿಸತಕ್ಕದ್ದು (ಕೊಲೊಸ್ಸೆ 1:5).

© 2009 Truth for Today